# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1385 |
| ಸದಸ್ಯರ ಹೆಸರು | ಶ್ರೀ. ಸುನೀಲ್ ವಲ್ಯಾಪುರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 22-08-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಂದು ವರ್ಷಕ್ಕೆ ಬೇಕಾಗುವ ಯೂರಿಯಾ ಗೊಬ್ಬರದ ಪ್ರಮಾಣ ಎಷ್ಟು; ಪ್ರಸ್ತುತ ವರ್ಷ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ಯೂರಿಯಾ ಗೊಬ್ಬರದ ಪ್ರಮಾಣ ಎಷ್ಟು; | ರಾಜ್ಯದಲ್ಲಿ ಒಂದು ವರ್ಷಕ್ಕೆ ಮುಂಗಾರು/ಹಿಂಗಾರು ಬೇಸಿಗೆ ಹಂಗಾಮಿಗೆ ಸರಾಸರಿ ಒಟ್ಟು 17.34 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಅವಶ್ಯಕತೆಯಿರುತ್ತದೆ. ಪ್ರಸ್ತುತ ವರ್ಷ ಮುಂಗಾರು ಹಂಗಾಮಿಗೆ(ಏಪ್ರಿಲ್-2025 ರಿಂದ ಸೆಪ್ಟೆಂಬರ್-2025ರವರೆಗೆ) ಕೇಂದ್ರ ಸರ್ಕಾರದಿಂದ 11.17 ಲಕ್ಷ ಮೆ.ಟನ್ ಪ್ರಮಾಣದ ಯೂರಿಯಾ ರಸಗೊಬ್ಬರದ ಹಂಚಿಕೆಯಾಗಿದ್ದು, ದಿನಾಂಕ 19.08.2025ರಂತೆ ಒಟ್ಟು 6.56 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರ ಸರಬರಾಜಾಗಿರುತ್ತದೆ.<br>ಆರಂಭಿಕ ಶಿಲ್ಕು 3.46 ಲಕ್ಷ ಮೆ.ಟನ್ ಇರುತ್ತದೆ. |
| ಆ) | ಯಾವ ಯಾವ ಜಿಲ್ಲೆಗೆ ಎಷ್ಟು ಪ್ರಮಾಣದ ಗೊಬ್ಬರ ವಿತರಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಜಿಲ್ಲೆಗಳಿಗೆ ಯೂರಿಯಾ ರಸಗೊಬ್ಬರವನ್ನು ವಿತರಿಸಲಾಗಿರುವ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ಪ್ರಸಕ್ತ ವರ್ಷ ಬೇಡಿಕೆಯಂತೆ ಅಗತ್ಯ ಪ್ರಮಾಣದ ಯೂರಿಯಾ ಗೊಬ್ಬರ ರಾಜ್ಯಕ್ಕೆ ಪೂರೈಕೆ ಆಗಿದೆಯೇ; | ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರದ ಹಂಚಿಕೆಯಂತೆ ರಾಜ್ಯಕ್ಕೆ ಅಗತ್ಯ ಪ್ರಮಾಣದ ಯೂರಿಯಾ ರಸಗೊಬ್ಬರ ಪೂರೈಕೆಯಾಗಿರುವುದಿಲ್ಲ.<br>ಏಪ್ರಿಲ್ ಮಾಹೆಯಿಂದ ಆಗಸ್ಟ್-2025ರ ಮಾಹೆಯವರೆಗೆ 9.05 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಹಂಚಿಕೆಯಾಗಿದ್ದು, ಕೇಂದ್ರ ಸರ್ಕಾರದಿಂದ ದಿನಾಂಕ 19.08.2025ರವರೆಗೆ 6.56 ಲಕ್ಷ ಮೆ.ಟನ್ ಸರಬರಾಜಾಗಿರುತ್ತದೆ(ಆರಂಭಿಕ ಶಿಲ್ಕು-3.46 ಲಕ್ಷ ಮೆ.ಟನ್ ಹೊರತುಪಡಿಸಿ).<br>ಒಟ್ಟಾರೆ ಏಪ್ರಿಲ್ ಮಾಹೆಯಿಂದ ಆಗಸ್ಟ್-2025 ಮಾಹೆಯ ಅಂತ್ಯದವರೆಗೆ 2.49 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ. |
| ಈ) | ಆಗಿಲ್ಲದಿದ್ದರೆ ಯೂರಿಯಾ ಗೊಬ್ಬರದ ಕೊರತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದಿಂದ ಬೇಡಿಕೆಗನುಗುಣವಾಗಿ ಯೂರಿಯಾ ರಸಗೊಬ್ಬರವು ಸರಬರಾಜಾಗದ ಕಾರಣ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಯೂರಿಯಾ ರಸಗೊಬ್ಬರಕ್ಕೆ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ರಸಗೊಬ್ಬರದ ಕೊರತೆಯನ್ನು ನೀಗಿಸಲು ಕೈಗೊಂಡಿರುವ ಕ್ರಮಗಳು:<br>• ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕೃಷಿ ಸಚಿವರಿಂದ ರಾಜ್ಯದ ಯೂರಿಯಾ ರಸಗೊಬ್ಬರದ ಬೇಡಿಕೆಗನುಗುಣವಾಗಿ ಪೂರೈಕೆ ಮಾಡಲು ಕೋರಿ ಕೇಂದ್ರ |

| | | |
|---|---|---|
| | | ಸರ್ಕಾರದ ರಸಗೊಬ್ಬರ ಸಚಿವರಿಗೆ ಮನವಿಯನ್ನು ಸಲ್ಲಿಸಲಾಗಿದೆ.<br>• ಕೇಂದ್ರದ ಮಾನ್ಯ ಕೃಷಿ ಮತ್ತು ರೈತ ಕಲ್ಯಾಣ ಸಚಿವರು ದಿನಾಂಕ 14.08.2025ರಂದು ನಡೆಸಿದ ವಿಡಿಯೋ ಸಂವಾದದಲ್ಲಿಯೂ ಕೂಡ ಮಾನ್ಯ ಕೃಷಿ ಸಚಿವರು ರಾಜ್ಯಕ್ಕೆ ಇನ್ನೂ 2.67 ಲಕ್ಷ ಮೆ.ಟನ್ ಯೂರಿಯಾ ಕೊರತೆ ಇದ್ದು, ಆದಷ್ಟು ಬೇಗ ಪೂರೈಸುವಂತೆ ಕೋರಿದ್ದಾರೆ.<br>• ಬೇಡಿಕೆಗನುಗುಣವಾಗಿ ರಾಜ್ಯಕ್ಕೆ ಯೂರಿಯಾ ರಸಗೊಬ್ಬರವನ್ನು ಸರಬರಾಜು ಮಾಡಲು ಇಲಾಖೆಯಿಂದ ಪತ್ರ ಮುಖೇನ ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ.<br>• ರಾಜ್ಯಾದ್ಯಂತ ದೂರದರ್ಶನ, ಕರಪತ್ರಗಳು, ದಿನಪತ್ರಿಕೆಯಲ್ಲಿ ಲೇಖನಗಳ ಮುಖಾಂತರ ಯೂರಿಯಾ ರಸಗೊಬ್ಬರದ ವಿವೇಚನಾತ್ಮಕ ಬಳಕೆ ಮತ್ತು ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯಾವನ್ನು ಮೇಲುಗೊಬ್ಬರವಾಗಿ ಬಳಕೆ ಮಾಡುವುದರ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>• NFSM (ಆಹಾರ ಪೌಷ್ಠಿಕಾಂಶ ಭದ್ರತೆ ಯೋಜನೆಯಡಿ) ನ್ಯಾನೋ ಯೂರಿಯಾದ ಬಳಕೆಯನ್ನು ಉತ್ತೇಜಿಸಲಾಗುತ್ತಿದೆ.<br>• ಕೇಂದ್ರ ಸರ್ಕಾರದ ರಸಗೊಬ್ಬರ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ರಾಜ್ಯದ ಬೇಡಿಕೆಗನುಗುಣವಾಗಿ ಯೂರಿಯಾ ರಸಗೊಬ್ಬರದ ಪೂರೈಕೆಗೆ ಕ್ರಮವಹಿಸಲಾಗುತ್ತಿದೆ.<br>• ಪ್ರತಿದಿನ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಗೂಗಲ್ ಮೀಟ್ ಮೂಲಕ ರಸಗೊಬ್ಬರದ ಲಭ್ಯತೆ ಮತ್ತು ಬೇಡಿಕೆಯ ಬಗ್ಗೆ ಮಾಹಿತಿಯನ್ನು ಪಡೆದು, ಬೇಡಿಕೆಗನುಗುಣವಾಗಿ ಪೂರೈಕೆಗೆ ಕ್ರಮವಹಿಸಲಾಗುತ್ತಿದೆ.<br>• ತೀವ್ರ ಯೂರಿಯಾ ಬೇಡಿಕೆಯಿರುವ ಜಿಲ್ಲೆಗಳಿಗೆ ಬೇರೆ ಜಿಲ್ಲೆಗಳಲ್ಲಿರುವ ಕಾಪು ದಾಸ್ತಾನಿನಿಂದ ಸಹಕಾರ ಸಂಘಗಳ ಮೂಲಕ ರೈತರಿಗೆ ವಿತರಿಸಲು ಕ್ರಮವಹಿಸಲಾಗುತ್ತಿದೆ. |
| ಉ) | ಯೂರಿಯಾ ಗೊಬ್ಬರ ನಿಗದಿತ ದರಕ್ಕಿಂತ ಹೆಚ್ಚಿನ ಹಣವನ್ನು ರೈತರಿಂದ ವಸೂಲಿ ಮಾಡುತ್ತಿರುವುದು ಹಾಗೂ ಕಚ್ಚಾ ಬಿಲ್ಲು ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಯೂರಿಯಾ ರಸಗೊಬ್ಬರವನ್ನು ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಿರುವ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ. |
| ಊ) | ಬಂದಿದ್ದಲ್ಲಿ, ಅಂತಹ ಮಾರಾಟಗಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ: (ಮಾಹಿತಿ ನೀಡುವುದು) | ಪ್ರಸಕ್ತ ಸಾಲಿನಲ್ಲಿ (ಜುಲೈ ಮಾಹೆಯ ಅಂತ್ಯಕ್ಕೆ) ರಾಜ್ಯದಲ್ಲಿ ಯೂರಿಯಾ ರಸಗೊಬ್ಬರವನ್ನು ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ 17 ಪ್ರಕರಣಗಳು ಕಂಡುಬಂದಿದ್ದು, 16 ಮಾರಾಟಗಾರರ ಪರವಾನಗಿಯನ್ನು ಅಮಾನತ್ತು ಮಾಡಲಾಗಿದೆ.<br>ವಿವರ ಕೆಳಕಂಡಂತಿದೆ:<br>1. ಬೆಂಗಳೂರು ದಕ್ಷಿಣ-1<br>2. ದಾವಣಗೆರೆ-1<br>3. ಗದಗ-2<br>4. ಕಲಬುರಗಿ-5 |

| | | |
|---|---|---|
| | | 5. ಕೊಪ್ಪಳ-2<br>6. ರಾಯಚೂರು-2<br>7. ವಿಜಯನಗರ-2<br>8. ಯಾದಗಿರಿ-1<br>ರಾಯಚೂರು ಜಿಲ್ಲೆಯಲ್ಲಿ ಒಂದು ಚಿಲ್ಲರೆ ರಸಗೊಬ್ಬರ ಮಾರಾಟ ಪರವಾನಗಿಯನ್ನು ರದ್ದು ಪಡಿಸಲಾಗಿರುತ್ತದೆ. |
| ಋ) | ಯೂರಿಯಾ ಗೊಬ್ಬರ ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸಿ ಅಮಾಯಕ ರೈತರನ್ನು ಸುಲಿಗೆ ಮಾಡುತ್ತಿರುವ ಕಾಳ ದಂಧೆಕೋರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಸನ್ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದಂತೆ, ಕೃಷಿ, ಕಂದಾಯ ಮತ್ತು ಪೋಲೀಸ್ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಯೂರಿಯಾ ರಸಗೊಬ್ಬರದ ಅನಧಿಕೃತ ಶೇಖರಣೆ/ಸಂಗ್ರಹಣೆ/ದುಬಾರಿ ಬೆಲೆಯಲ್ಲಿ ಮಾರಾಟದ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ರಸಗೊಬ್ಬರ (ನಿಯಂತ್ರಣ) ಆದೇಶ,1985ರ ಉಲ್ಲಂಘನೆ ಸಂಬಂಧ ಕ್ರಮ ಕೈಗೊಳ್ಳಲು ರಾಜ್ಯದಲ್ಲಿ ರಸಗೊಬ್ಬರ ಪರಿವೀಕ್ಷಕರನ್ನು ಅಧಿಸೂಚಿಸಲಾಗಿರುತ್ತದೆ ಹಾಗೂ ಅಪರ ಕೃಷಿ ನಿರ್ದೇಶಕರು (ಜಾಗೃತ ಕೋಶ) ರವರ ನೇತೃತ್ವದಲ್ಲಿ ಜಾಗೃತ ಕೋಶ ಸೃಜಿಸಲಾಗಿದೆ ಮತ್ತು ಇವರ ಅಧೀನದಲ್ಲಿ ರಾಜ್ಯದ 4 ಕಂದಾಯ ವಿಭಾಗಗಳಲ್ಲಿ (ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ) ಜಂಟಿ ಕೃಷಿ ನಿರ್ದೇಶಕರು (ಜಾಗೃತ ಕೋಶ) ಕಾರ್ಯನಿರ್ವಹಿಸುತ್ತಿದ್ದಾರೆ. ಜಾಗೃತಕೋಶದ ಅಧಿಕಾರಿಗಳು, ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು(ಜಾರಿದಳ) ಮತ್ತು ಅಧಿಸೂಚಿಸಿರುವ ರಸಗೊಬ್ಬರ ಪರಿವೀಕ್ಷಕರು ದೂರುಗಳನ್ನು ಆಧರಿಸಿ/ಅನಿರೀಕ್ಷಿತವಾಗಿ/ಆಗಿಂದ್ದಾಗ್ಗೆ ಅವರ ವ್ಯಾಪ್ತಿಯಲ್ಲಿ ಯೂರಿಯಾ ಸೇರಿ ಇತರೆ ರಸಗೊಬ್ಬರಗಳನ್ನು ಅಕ್ರಮವಾಗಿ ದಾಸ್ತಾನು/ ಸಾಗಾಣಿಕೆ ಮಾಡಿ ಕೃತಕ ಅಭಾವ ಸೃಷ್ಟಿಸಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ.<br><br>ಇತರೆ ರಾಜ್ಯಗಳ ಜೊತೆ ಗಡಿ ಹೊಂದಿರುವ ಜಿಲ್ಲೆಗಳ ಚೆಕ್ ಪೋಸ್ಟ್ ಗಳಲ್ಲಿ ಅನಧಿಕೃತವಾಗಿ/ಅಕ್ರಮವಾಗಿ ಯೂರಿಯಾ ಹಾಗೂ ಇನ್ನಿತರ ರಸಗೊಬ್ಬರಗಳ ಸಾಗಾಣಿಕೆಯ ಬಗ್ಗೆ ಕೃಷಿ ಇಲಾಖೆ ಮತ್ತು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಸಂಬಂಧಪಟ್ಟ ಇಲಾಖೆಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ನಿರ್ದೇಶನ ನೀಡಿ ಕಟ್ಟುನಿಟ್ಟಿನ ಕ್ರಮವಹಿಸಲಾಗುತ್ತಿದೆ.<br><br>ಕೃಷಿಗೆ ಬಳಸುತ್ತಿರುವ ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆಯಾಗುವುದನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ ಕಷಿ ಇಲಾಖೆ, ಪೊಲೀಸ್ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ತಂಡಗಳನ್ನು ರಚಿಸಿ ಜಿಲ್ಲಾಧಿಕಾರಿಗಳಿಂದ ಆದೇಶ ಹೊರಡಿಸಲಾಗಿದೆ. ಸದರಿ ತಂಡಗಳು ಯೂರಿಯಾ ಬಳಸುತ್ತಿರುವ ಕೈಗಾರಿಕೆಗಳನ್ನು ಪರಿಶೀಲಿಸುತ್ತಿದ್ದು, ಕೃಷಿಗೆ ಬಳಸುವ ಸಹಾಯಾಧನದ ಯೂರಿಯಾವನ್ನು ಬಳಸುತ್ತಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸಲಾಗುತ್ತಿದೆ. |

ಪ್ರಸಕ್ತ ಸಾಲಿನಲ್ಲಿ ಯೂರಿಯಾ ರಸಗೊಬ್ಬರವನ್ನು ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸಿ ಕಾಳಸಂತೆಯಲ್ಲಿ ಮಾರಾಟ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಬಳಸುತ್ತಿರುವ 06 ಪ್ರಕರಣಗಳು ಕಂಡುಬಂದಿದ್ದು ಸಂಬಂಧಪಟ್ಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಎಫ್.ಐ.ಆರ್ ದಾಖಲಿಸಿ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುತ್ತಿದೆ.

ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ಜಿಲ್ಲೆ | ಎಫ್.ಐ.ಆರ್ ಸಂಖ್ಯೆ |
|---|---|---|
| 1 | ಹಾಸನ | FIR 44/2025 |
| 2 | ತುಮಕೂರು | FIR 0162/2025 |
| 3 | ತುಮಕೂರು | FIR 0129/2025 |
| 4 | ಮೈಸೂರು | FIR 0169/2025 |
| 5 | ಹಾಸನ | FIR 126/2025 |
| 6 | ಚಿಕ್ಕಮಗಳೂರು | FIR 0073/2025 |

ಸಂಖ್ಯೆ: AGRI/277/ACT/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

ಅನುಬಂಧ (ಎಲ್.ಸಿ.ಕ್ಯೂ-1385)

2025 ನೇ ಸಾಲಿನ ಮುಂಗಾರು ಹಂಗಾಮಿನ ಜಿಲ್ಲಾವಾರು ಯೂರಿಯಾ ರಸಗೊಬ್ಬರ ಸರಬರಾಜು ಮತ್ತು ಮಾರಾಟ ವಿವರ (ದಿನಾಂಕ 19.08.2025 ರವರೆಗೆ) ಮೆ. ಟನ್ ಗಳಲ್ಲಿ

| ಕ್ರ. ಸಂ. | ಜಿಲ್ಲೆ | ಸರಬರಾಜು (ಆರಂಭಿಕ ಶಿಲ್ಕು ಒಳಗೊಂಡಂತೆ) | ಮಾರಾಟ | ಉಳಿಕೆ ದಾಸ್ತಾನು ಪ್ರಮಾಣ 19.08.2025 ರಂತೆ |
|---|---|---|---|---|
| 1 | ಬಾಗಲಕೋಟೆ | 53789 | 50432 | 3357 |
| 2 | ಬೆಂಗಳೂರು ಗ್ರಾಮಾಂತರ | 8007 | 7013 | 994 |
| 3 | ಬೆಳಗಾಂ | 110326 | 104474 | 5852 |
| 4 | ಬಳ್ಳಾರಿ | 43964 | 38722 | 5242 |
| 5 | ಬೆಂಗಳೂರು ನಗರ | 11474 | 9905 | 1569 |
| 6 | ಬೀದರ್ | 12764 | 10960 | 1804 |
| 7 | ಬಿಜಾಪುರ | 52424 | 48244 | 4180 |
| 8 | ಚಾಮರಾಜನಗರ | 13873 | 12348 | 1525 |
| 9 | ಚಿಕ್ಕಬಳ್ಳಾಪುರ | 13682 | 12255 | 1427 |
| 10 | ಚಿಕ್ಕಮಗಳೂರು | 29524 | 25766 | 3758 |
| 11 | ಚಿತ್ರದುರ್ಗ | 27812 | 25220 | 2592 |
| 12 | ದಕ್ಷಿಣ ಕನ್ನಡ | 3984 | 2101 | 1883 |
| 13 | ದಾವಣಗೆರೆ | 47607 | 44291 | 3316 |
| 14 | ಧಾರವಾಡ | 27366 | 24836 | 2530 |
| 15 | ಗದಗ | 25375 | 24114 | 1261 |
| 16 | ಕಲ್ಬುರ್ಗಿ | 25350 | 21132 | 4218 |
| 17 | ಹಾಸನ | 50648 | 47625 | 3023 |
| 18 | ಹಾವೇರಿ | 62648 | 60140 | 2508 |
| 19 | ಕೊಡಗು | 16596 | 13284 | 3312 |
| 20 | ಕೋಲಾರ | 11473 | 9607 | 1866 |
| 21 | ಕೊಪ್ಪಳ | 42534 | 40607 | 1927 |
| 22 | ಮಂಡ್ಯ | 32773 | 29180 | 3593 |
| 23 | ಮೈಸೂರು | 40830 | 33881 | 6949 |
| 24 | ರಾಯಚೂರು | 64557 | 57114 | 7443 |
| 25 | ರಾಮನಗರ | 13380 | 12193 | 1187 |
| 26 | ಶಿವಮೊಗ್ಗ | 29935 | 25491 | 4444 |
| 27 | ತುಮಕೂರು | 31954 | 28135 | 3819 |
| 28 | ಉಡುಪಿ | 2562 | 1788 | 774 |
| 29 | ಉತ್ತರ ಕನ್ನಡ | 14251 | 13218 | 1033 |
| 30 | ವಿಜಯನಗರ | 38674 | 35838 | 2836 |
| 31 | ಯಾದಗಿರಿ | 42502 | 38083 | 4419 |
|  | ಒಟ್ಟು | **1002637** | **907996** | **94641** |